# ಕರ್ನಾಟಕ ವಿಧಾನಪರಿಷತ್ತು

ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

**ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ : 18-03-2021 ಪ್ರಶ್ನೆ ಸಂಖ್ಯೆ : 1304(1598)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಅ. ದೇವೇಗೌಡ(ಪದವೀಧರರ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 18-03-2021

ಉತ್ತರಿಸುವ ಸಚಿವರು: ಮಾನ್ಯ ಮುಖ್ಯಮಂತ್ರಿಗಳು

ವಿಷಯ : ಬನಶಂಕರಿ 6ನೇ ಹಂತದ 4ನೇ `ಟಿ' ಬ್ಲಾಕ್‌ನ ಮೂಲಭೂತ ಸೌಕರ್ಯಗಳ ಕುರಿತು

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವತಿಯಿಂದ ನಿರ್ಮಾಣಗೊಂಡಿರುವ ಬನಶಂಕರಿ 6ನೇ ಹಂತದ 4ನೇ `ಟಿ' ಬ್ಲಾಕ್ (ಮುಂದುವರೆದ ಬಡಾವಣೆ) ನಲ್ಲಿನ ರಸ್ತೆಗಳು ಡಾಂಬರೀಕರಣಗೊಳ್ಳದೆ ಹಾಳಾಗಿದ್ದು, ಇದರ ಬಗ್ಗೆ ಕೈಗೊಂಡಿರುವ ಕ್ರಮಗಳೇನು;

(ಆ) ಈ ಬಡಾವಣೆಯ ರಸ್ತೆಗಳಿಗೆ ಸಂಖ್ಯೆಯನ್ನು ಇದುವರೆವಿಗೂ ನೀಡಿರುವುದಿಲ್ಲ, ಇದರ ಬಗ್ಗೆ ಕೈಗೊಂಡಿರುವ ಕ್ರಮಗಳೇನು;

(ಇ) ಸದರಿ ಬಡಾವಣೆಯಲ್ಲಿ ಬಹುತೇಕ ವಿದ್ಯುತ್ ತೊಂದರೆ ಉಂಟಾಗುತ್ತಿದ್ದು, ಸೂಕ್ತ ಟ್ರಾನ್ಸ್‌ಫಾರಂನ್ನು ಅಳವಡಿಸುವ ಬಗ್ಗೆ ಇದುವರೆವಿಗೂ ಕ್ರಮ ಕೈಗೊಳ್ಳದಿರಲು ಕಾರಣವೇನು?

(ಈ) ಸದರಿ ಬಡಾವಣೆಯಲ್ಲಿನ ಒಳಚರಂಡಿ ವ್ಯವಸ್ಥೆಯು ಸಂಪೂರ್ಣ ಹಾಳಾಗಿದ್ದು, ಇದುವರೆವಿಗೂ ದುರಸ್ಥಿಗೊಳಿಸದಿರಲು ಕಾರಣವೇನು;

(ಉ) ಸದರಿ ಬಡಾವಣೆಗೆ ಕಾವೇರಿ ನೀರಿನ ವ್ಯವಸ್ಥೆಯನ್ನು ಕಲ್ಪಿಸದಿರುವ ಬಗ್ಗೆ ಕಾರಣ ಹಾಗೂ ಯಾವಾಗ ಕಲ್ಪಿಸಲಾಗುವುದು?